ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಯಲಹಂಕ ಹೋಬಳಿ, ಗಸ್ತಿ ಕೆಂಪನಹಳ್ಳಿ ಗ್ರಾಮದ ಸ.ನಂ. 04 ಮತ್ತು 08ರ ನಿವೇಶನ ಸಂಖ್ಯೆ 210ನ್ನು 2010-11 ನೇ ಇಸವಿಯ ಕ್ರಯದ ಬಗ್ಗೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :-

308(385) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಯಲಹಂಕ ಹೋಬಳಿ, ಗಸ್ತಿ ಕೆಂಪನಹಳ್ಳಿ ಗ್ರಾಮದ ಸರ್ವೆ ನಂಬರ್ 4 ಮತ್ತು 8 ರಲ್ಲಿನ ನಿವೇಶನ ಸಂಖ್ಯೆ 210 ನ್ನು 2010-11ನೇ ಇಸವಿಯಲ್ಲಿ ಯಾರು ಯಾರಿಂದ ಕ್ರಯಕ್ಕೆ ಪಡೆದಿರುತ್ತಾರೆ ;

(ಆ) ಮೇಲ್ಕಂಡ ಖರೀದಿದಾರರ ಹೆಸರಿನಲ್ಲಿ ಈವರೆÀಗೆ ಬೆಂಗಳೂರು ಉತ್ತರ ತಾಲೂಕಿನಲ್ಲಿ ಯಾವ ಯಾವ ಗ್ರಾಮಗಳ ಸರ್ವೆ ನಂಬರ್ ಗಳಲ್ಲಿ ನಿವೇಶನ ಹಾಗೂ ಜಮೀನುಗಳನ್ನು ಯಾವ ಯಾವ ನೋಂದಣಿ ಕಛೇರಿಗಳಲ್ಲಿ ನೋಂದಣಿಯಾಗಿರುತ್ತವೆ ; (ಸರ್ವೆ ನಂಬರ್, ನಿವೇಶನ ಸಂಖ್ಯೆ ಹಾಗೂ ಜಮೀನಿನ ಸಂಪೂರ್ಣ ಮಾಹಿತಿ ನೀಡುವುದು)

(ಇ) ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಗೌರಿಬಿದನೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳ ಸರ್ವೆನಂಬರ್‌ಗಳಲ್ಲಿ ನಿವೇಶನ ಹಾಗೂ ಜಮೀನುಗಳು ಯಾವ ಯಾವ ನೋಂದಣಿ ಕಛೇರಿಗಳಲ್ಲಿ ಮೇಲ್ಕಂಡ ಅಭಿವೃದ್ಧಿದಾರರ ಹೆಸರಿನಲ್ಲಿ ನೋಂದಣಿಯಾಗಿರುತ್ತವೆ ? (ಸರ್ವೆ ನಂಬರ್, ನಿವೇಶನದ ಸಂಖ್ಯೆ ಹಾಗೂ ಜಮೀನಿನ ಸಂಪೂರ್ಣ ಮಾಹಿತಿ ನೀಡುವುದು)